ಆ ದಿನ ಅದನ್ನವಳೇ ಒಯ್ದಿದ್ದಾಳೆ. ತಾನಾದರೂ ಏನು ಮಾಡಲು ಸಾಧ್ಯ ಅಂದುಕೊಂಡಳು. ಮಗುವನ್ನು ಕಟ್ಟಿಕೊಂಡು ಹೋಗಿದ್ದಾಳೆ. ವರ್ಷದ ಮಗು ಅವಳನ್ನು ಬಿಟ್ಟು ಇರುವುದಿಲ್ಲ. ಅವಳ ಆಫೀಸಿನ ಕೆಲಸಗಳು ಸಾಂಗವಾಗಿ ನಡೆದು ಪಿಂಚಣಿ ಬರುವಂತಾದರೆ ಸಾಕು... 'ಯಾ ಅಲ್ಲಾ!' ಎಂಬ ಉದ್ಗಾರವೊಂದು ಅವಳ ಗಂಟಲಿಂದ ಹೊರಬಂತು. ಹೊಟ್ಟೆ ತುಂಬಿಸಿಕೊಂಡ ಸದ್ದಾಮ ಆಗಲೇ ತನ್ನ ವರಸೆ ಶುರುಮಾಡಿದ್ದ. ದಷ್ಟಪುಷ್ಟವಾದ ಮೊಟ್ಟೆಕೋಳಿಯ ಮೇಲೆ ಹತ್ತಾರು ಬಾರಿ ಎಗರಿ ಕಡೆಗೂ ತನ್ನ ಇಷ್ಟಾರ್ಥವನ್ನು ಪೂರೈಸಿಕೊಂಡಿದ್ದ!

ಸಂಜೆಗೆ ಮಗಳು ಬರುವ ವೇಳೆಗೆ ಅಡುಗೆಯನ್ನಾದರೂ ಮಾಡಿಡಬೇಕು. ಪಾಪ ಸಾಕಾಗಿ ಬರುತ್ತಾಳೆ ಎಂದುಕೊಳ್ಳುತ್ತಾ ಬೆಳಗ್ಗೆ ತಾನೇ ರೆಹಮಾನ ಹೇಮಾವತಿಯಲ್ಲಿ ಹಿಡಿದು ತಂದುಕೊಟ್ಟಿದ್ದ ಕಾಟ್ಲಾ ಮೀನನ್ನು ಇಟ್ಟಿದ್ದ ಸ್ಟೀಲ್ ಬೇಸಿನನ್ನು ಅಡುಗೆಮನೆಯಿಂದ ತಂದು ಕುಕ್ಕರಗಾಲಲ್ಲಿ ಕೂತು ಹಾಸುಗಲ್ಲಿನ ಮೇಲೆ ಹೊರಮೈಯನ್ನುಜ್ಜತೊಡಗಿದಳು. ಮುಳ್ಳುಗಳೆಲ್ಲ ಉದುರಿ ಹದವಾದ ಮೇಲೆ, ಪ್ಲಾಸ್ಟಿಕ್ ಹಾಸಿ ಈಳಿಗೆಯಿಟ್ಟುಕೊಂಡು ಕೂತು ಚೌಕಾಕಾರದ ತುಂಡುಗಳಾಗಿ ಹೆಚ್ಚತೊಡಗಿದಳು. ಮೀನಿನ ವಾಸನೆಗೆ 'ಮಿಯಾಂವ್' ಎಂದು ಕಾಲಿನ ಬಳಿ ಬಂದ ಬಿಲ್ಲಿಗೊಂದು ತುಂಡು ಮೀನೆಸೆದು ಗದರಿ ಹೊರಕಳಿಸಿ, ಮೀನಿನ ತುಂಡುಗಳಿದ್ದ ಪ್ಲಾಸ್ಟಿಕ್ಕನ್ನು ನಾಜೂಕಾಗಿ ಎತ್ತಿ ಅಡುಗೆಮನೆಗೆ ಹೋಗಿ ಮಣ್ಣಿನ ಗಟ್ಟಿ ಮಡಿಕೆಯಲ್ಲಿ ಹಾಕಿ ಬೇಯಲಿಟ್ಟು ಮಸಾಲೆಗೆ ಹವಣಿಸಿಕೊಂಡಳು. ಬೆಳ್ಳುಳ್ಳಿ ಮೆಣಸಿನ ಕಾಯಿ ಮುಂದಾಗಿದ್ದ ಮಸಾಲೆಯನ್ನು ಮಿಕ್ಸಿಯಲ್ಲಿ ಅರೆಯುವಾಗ ಮೀನು ಬೆಂದ ಪರಿಮಳ ಬಂತು. ಈ ಮಿಕ್ಸಿ ಬಂದ ಮೇಲೆ ತನಗೆ ಕಲ್ಲಿನಲ್ಲಿ ಅರೆಯುವ ಕೆಲಸದಿಂದ ಮುಕ್ತಿದೊರಕಿದ್ದು ನೆನಪಾಯಿತು. ಈ ಮಿಕ್ಸಿಯನ್ನು ಅಳಿಯ ಇಲಿಯಾಸನೇ ತಂದಿದ್ದಲ್ಲವ ಎಂದುಕೊಳ್ಳುತ್ತ, ಎಲ್ಲವನ್ನು ಬೆರೆಸಿ ಕುದಿಸುತ್ತಾ. ಇನ್ನೊಂದು ಒಲೆಯಲ್ಲಿ ಕುಕ್ಕರಿನಲ್ಲಿ ಅನ್ನಕ್ಕಿಟ್ಟಳು.

ಏಳೂ ಮುಕ್ಕಾಲರ ವೇಳೆಗೆ ಮಗಳು ಸೋತ ಹೆಜ್ಜೆ ಹಾಕುತ್ತಾ ನಿದ್ದೆ ಮಾಡಿದ್ದ ಮಗುವನ್ನು ಹೆಗಲಿಗೊರಗಿಸಿಕೊಂಡು ಮನೆಗೆ ಬಂದಳು. ಅವಳ ಬಳಲಿದ ಮುಖ ಸೋತ ದೇಹವನ್ನು ನೋಡಿ ಫಾತುಮ್ಮಳ ಕರುಳು ಕಿವಿಚಿದಂತಾಯ್ತು. ಗೇಟಿನ ಬಳಿಯೇ ಹೋಗಿ ಮಗುವನ್ನು ಎತ್ತಿಕೊಳ್ಳುತ್ತಾ, 'ಆವ್ರೋ ಬೇಟಿ... ರಾಜಾ ಬೇಟಿ... ಚುಚು ಥಕ್ ದಯೇ ಹೋ' ಎನುತ್ತಾ ತನ್ನ ಎದೆಗವಚಿಕೊಂಡು ಒಳಬಂದು ಹಜಾರದ ನಾಗಾಲಿಯ ಮೇಲೆ ಹಾಕಿದ್ದ ದಟ್ಟದಮೇಲೆ ಮಲಗಿಸಿ, ಪಕ್ಕಕ್ಕೆ ದಿಂಬುಗಳನ್ನಿಟ್ಟು ಹಗುರಾದ ವಸ್ತ್ರವೊಂದನ್ನು ಹೊದಿಸಿದಳು. ಮಗಳು ಕೈಕಾಲು ತೊಳೆದು ಒಳ ಬರುವ ವೇಳೆಗೆ ತಾಟುಗಳನ್ನು ಅಣಿಗೊಳಿಸಿದ್ದಳು. ಇಬ್ಬರೂ ಊಟ ಮಾಡುತ್ತಲೇ ಮಾತು ಬಿಚ್ಚಿಕೊಳ್ಳತೊಡಗಿತು. 'ಅನ್ವರ್ ಬಂದಿದ್ನಾ?' ಎಂದಾಗ, 'ಹುಂ ಮಾಮ ಬಂದಿದ್ದ. ಅವ್ನೇ ಕೆ.ಇ.ಬಿ ಆಫೀಸ್‌ಗೆ ಕರಕೊಂಡೋಗಿದ್ದ' ಅಂದಳು. ಮೀನಿನ ಹೋಳನ್ನೆತ್ತಿ ಬಾಯಿಯಲ್ಲಿ ಆಸ್ವಾದಿಸುತ್ತಾ, 'ಎಲ್ಲೈತೆ ಆಫೀಸು' ಎಂದು ಕುತೂಹಲದಿಂದ ಕೇಳಿದ ತಾಯಿಗೆ, 'ಅದೇ... ಅಪೇರಾ ಟಾಕೀಸ್ ಐತಲ್ಲ... ನಾವೆಲ್ಲ ಸಿನಿಮಾಗೆ ಹೋಗಿದ್ವಲ್ವ?' ಎಂದಳು. ಯಾವುದೋ ಗತಕಾಲದ ರಸಸ್ಮೃತಿಯೊಂದನ್ನು ನೆನದುಕೊಳ್ಳುತ್ತಾ, 'ಹುಂ ನಿನ್ನ ಮಿಯಾ ಇಲಿಯಾಸ ಕರಕೊಂಡು ಹೋಗಿದ್ನಲ್ಲ... ಅದ್ಯಾವ್ದೋ ಕನ್ನಡ ಸಿನಿಮಾಗೆ ಮಳೇದು ಸಿನಿಮಾ' ಎಂದಳು ಮಗಳನ್ನು ಅಂಗೀಕರಿಸುವಂತೆ. 'ಆಮೇಲೆ?' ಎಂದಾಗ. 'ಅದೇ ಮಾಮನೆ ಮಾತಾಡ್ತು ಸಾಯೇಬ್ರ ಜೊತೆ. ಅವ್ರಂತಾರೆ ಫ್ಯಾಮಿಲಿ ಪೆನ್‌ಶನ್‌ಗೆ ರಿಜಿಸ್ಟ್ರಾಗಿರೋದು ಇಬ್ರ ಹೆಸರು ಮಾತ್ರ. ನಸ್ರೀನ್‌ಬೇಗಮ್, ಸಕೀನಾ ಬೇಗಂ... ನಂದು ಹೆಸ್ರು ಇಲ್ಲ ಅಂದ್ರು. ನಂಗೆ ಅಳಾನೆ ಬಂದ್‌ಬಿಡ್ತು. ಅಳ್ತಾ ನಿಂತ್ಕೊಂಡೆ. ಮಾಮ ಅವ್ರಿಗೆ ಎಲ್ಲಾನು ಹೇಳಿದ್ರು... ಇವ್ಳು ನಮ್ಮಕ್ಕನ ಮಗಳೇನೆ... ಈಗ ಎರಡು ವರ್ಷಗಳ ಕೆಳಗೆ ಮದ್ವೆ ಆಯ್ತು. ಹೊಳೇನರಸೀಪುರದ ತಾವ ಜಾಂದಾಳ್ ಕೊಪ್ಪಲಿನಲ್ಲಿ ಇವ್ರು ಇರೋದು. ಇಲಿಯಾಸಣ್ಣ ಅಲ್ಗೆ ಮೀಟರ್ ರೀಡರಾಗಿ ಬಂದಾಗ ಇವಳ ಜೊತೆ ನಿಖಾ ಆಯ್ತು. ಹೊಳೇನರಸೀಪುರದಲ್ಲೇ ಆಗಿದ್ದು. ಅವ್ರು ಆಫೀಸ್ಗೆ ಹೆಸ್ರ ಕೊಡೋದು ಬಿಟ್ಹೋಗೈತೆ. ನಾನೇ ಇದೀನಲ್ಲ ಯಾಕೆ ಅಂತ ಸುಮ್ಮೆ ಇದ್ರು ಅನ್ನಿಸ್ತೈತೆ. ಈಗ ಈ ಮಗುಬೇರೆ ಐತೆ. ಇವ್ಳು ನಮ್ಮಕ್ಕನ ಮಗಳು. ನಮ್ಮ ಭಾವ